# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೊರಮಾವು ಉಪವಲಯ, ಮಹದೇವಪುರ ವಲಯ, ಬೆಂಗಳೂರು

ಸಂಖ್ಯೆ:ಬಿಬಿಎಂಪಿ/ಸ.ಕಾ.ಅ/ಹೊಉವ/ಪಿಆರ್/ /2021-22 ದಿನಾಂಕ: 24-06-2021

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರು ದಿನಾಂಕ:24.06.2021 ರಂದು ಹೊರಮಾವು ಉಪವಿಭಾಗದ ವಾರ್ಡ್-25 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| | | ಅಧಿಕಾರಿಗಳು | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ನಂ.25 ಹಾಗೂ ಉಪ ಆಯುಕ್ತರು (ಮಹದೇವಪುರ) | 9480684059 |
| 2 | ಶ್ರೀ.ಚಂದ್ರಶೇಖರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಹೊರಮಾವು | - |
| 3 | ಶ್ರೀ.ರಮೇಶ್ | ವಾರ್ಡ್ ನಂ.25 ಸಹಾಯಕ ಅಭಿಯಂತರರು | 9739838297 |
| 4 | ಶ್ರೀ.ನಾರಾಯಣಸ್ವಾಮಿ | ಕಂದಾಯ ಪರಿವೀಕ್ಷಕರು | 9880817757 |
| 5 | ಶ್ರೀ.ಕೋದಂಡರಾಮ | ಬೀದಿದೀಪ ನಿರ್ವಹಣೆ | 9902031602 |
| 6 | ಶ್ರೀ.ಸದಾನಂದ | ಹೊರಮಾವು ಅಸೋಸಿಯೇಷನ್, ಪಿ&ಟಿ ಬಡಾವಣೆ | 9448394009 |

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.25 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲ್ಯೂಎಸ್ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

ಪು.ತಿ.ನೋ

ಸದಾನಂದ, ಪಿ&ಟಿ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್:-

- ಸದರಿಯವರು ಮಾತನಾಡುತ್ತಾ, ಈ ಬಡಾವಣೆಯಲ್ಲಿ ಜಯಪ್ರಕಾಶ್ ಎಂಬುವವರು ಸಾರ್ವಜನಿಕ ರಸ್ತೆ ಮಾಡಲು ಅಡಚಣೆ ಮಾಡುತ್ತಿರುವುದಾಗಿಯೂ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಪರಿಶೀಲನೆ ಮಾಡಿ ಸಮಸ್ಯೆ ಪರಿಹರಿಸಲು ಕೋರಿರುತ್ತಾರೆ.
- ಪಿ&ಟಿ ಬಡಾವಣೆಯಲ್ಲಿ ಹೊಸದಾಗಿ ಕೊಳವೆಬಾವಿ ಕೊರೆಯಲಾಗಿದ್ದು, ಅದಕ್ಕೆ ಹೊಸ ಮೋಟರ್ ಪಂಪ್ ಅಳವಡಿಸಲು ಕೋರಿರುತ್ತಾರೆ
- ಪಿ&ಟಿ ಬಡಾವಣೆಯಲ್ಲಿ ಹಾಲಿ ಕೊಳವೆಬಾವಿಯಲ್ಲಿ ಮೋಟರ್‌ಪಂಪ್ ತಳಕ್ಕೆ ಬಿದ್ದಿದ್ದು ಅದನ್ನು ಪರಿಶೀಲಿಸಿ, ಸರಿಪಡಿಸಲು ಕೋರಿರುತ್ತಾರೆ

  ಕ್ರಮ:-ಸಂಬಂಧಪಟ್ಟ ಸಹಾಯಕ ಅಭಿಯಂತರರು ಕ್ರಮವಹಿಸಲು ಸೂಚಿಲಾಯಿತು.

- ಪಿ&ಟಿ ಬಡಾವಣೆ 2ನೇ ಅಡ್ಡರಸ್ತೆಯ ಒಂದು ನಿವಾಸದಲ್ಲಿ ಪಾಲಿಕೆ ವತಿಯಿಂದ ಪರವಾನಗಿಯನ್ನು ಪಡೆಯದೇ ಸುಮಾರು 15 ರಿಂದ 20 ನಾಯಿಗಳನ್ನು ಸಾಕುತ್ತಿದ್ದು ಇದರಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಪರಿಶೀಲಿಸಿ ಕ್ರಮಕೈಗೊಳ್ಳಲು ಕೋರಿರುತ್ತಾರೆ.

  ಕ್ರಮ:-ಸಂಬಂಧಪಟ್ಟ ಹಿರಿಯ ಆರೋಗ್ಯ ಪರಿವೀಕ್ಷಕರು ಕ್ರಮವಹಿಸಲು ಸೂಚಿಲಾಯಿತು.

ಸಾರ್ವಜನಿಕರು:-

ಬಾಲಾಜಿ ಲೇಔಟ್ 2ನೇ ಅಡ್ಡರಸ್ತೆಗೆ ಡಾಂಬಾರೀಕರಣ ಮಾಡಿಸಲು ಮತ್ತು ರಾಮಯ್ಯರೆಡ್ಡಿ ಬಡಾವಣೆಯಲ್ಲಿ ಕಾವೇರಿ ನೀರು ಸರಬರಾಜುವಾಗುತ್ತಿಲ್ಲ, ನೀರು ಸರಬರಾಜು ಮಾಡಲು ಕೋರಿರುತ್ತಾರೆ.

ನೋಡಲ್ ಅಧಿಕಾರಿಯವರು ಸಭೆಗೆ ಹಾಜರಾಗಿರುವ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

H. S... 2?.6.21

ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
(ಮಹದೇವಪುರ) ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

24/6/2021

ಸಹಾಯಕ ಕಾರ್ಯಪಾಲಕ ಅಭಿಯಂತರರು
ಹೊರಮಾವು ಉಪವಿಭಾಗ